3) ಶಿಕ್ಷಕ ತರಬೇತಿ - ಪ್ರತಿ ಸೇವಾ ನಿರತ ಶಿಕ್ಷಕರಿಗೆ ವರ್ಷದಲ್ಲಿ 20 ದಿನ ತರಬೇತಿ.

ಖಾಸಗಿ ಅನುದಾನಿತ ಶಾಲೆಗಳಿಗೆ ನೀಡುತ್ತಿರುವ ಅನುದಾನ

1211 (1413) ಶ್ರೀ ಜಯಪ್ರಕಾಶ್ ಹೆಗ್ಡೆಕೆ (ಬ್ರಹ್ಮಾವರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಖಾಸಗಿ ಅನುದಾನಿತ ಶಾಲೆಗಳು ಇವೆ; ಅವುಗಳಿಗೆ ಇಲ್ಲಿಯವರೆಗೆ ನೀಡಲಾಗುತ್ತಿದ್ದು ವಾರ್ಷಿಕ ಅನುದಾನದ ಮೊತ್ತ ಎಷ್ಟು;

ಆ) ಪ್ರಸ್ತುತ ಜಾರಿಯಲ್ಲಿರುವ ಸದರಿ ಅನುದಾನವನ್ನು ನಿಲ್ಲಿಸಲು ಸರ್ಕಾರವು ತೀರ್ಮಾನ ತೆಗೆದುಕೊಂಡಿರುವುದು ನಿಜವೇ; ಹೌದಾದಲ್ಲಿ ಆ ಕುರಿತ ಕಾರಣಗಳೇನು;

ಇ) ಖಾಸಗಿ ಶಾಲೆಗಳು ಅನುದಾನವನ್ನು ಪಡೆದುಕೊಂಡು ಶಾಲೆಗಳನ್ನು ನಡೆಸುತ್ತಿದ್ದು, ಸರ್ಕಾರವು ಅನುದಾನವನ್ನು ನಿಲ್ಲಿಸಿದ್ದಲ್ಲಿ ಅವುಗಳ ಪರಿಣಾಮಗಳನ್ನು ಸರ್ಕಾರವು ಗಮನಿಸಿಲ್ಲವೆ ಗಮನಿಸಿದ್ದಲ್ಲಿ, ಆ ಕುರಿತಾದ ಸರ್ಕಾರದ ನಿಲುವೇನು?

ಪೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಒಟ್ಟು ಅನುದಾನಿತ ಶಾಲೆಗಳು : 4946

ಒಟ್ಟು ಅನುದಾನದ ಮೊತ್ತ : 50,248.81 ಲಕ್ಷಗಳು

ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನಿಂದ ಆಶ್ರಯ ಮನೆಗಳ ಮಂಜೂರಾತಿ

1212(463) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ನಿಂದ 01-02ರಲ್ಲಿ ರಾಜ್ಯದಲ್ಲಿ ಎಷ್ಟು ಆಶ್ರಯ ಮನೆಗಳನ್ನು ಮಂಜೂರು ಮಾಡಲಾಗಿದೆ; ಜಿಲ್ಲಾವಾರು ವಿವರ ನೀಡುವುದು;

ಆ) ಈ ಯೋಜನೆ ಸಂಪೂರ್ಣ ಸಾಲದ ಯೋಜನೆ ಅಥವಾ ರಿಯಾಯಿತಿ ಯೋಜನೆಯೇ;

ಇ) ಇಲ್ಲದಿದ್ದಲ್ಲಿ, ಕಡುಬಡವರಿಗೆ ಈ ಯೋಜನೆಯ ನೆರವು ಸಿಗುವಂತೆ ಈ ಯೋಜನೆಯನ್ನುಮಾರ್ಪಡಿಸಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) 1,45,378 ಮನೆಗಳು ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಆಶ್ರಯ ಯೋಜನೆಯಡಿ ಮನೆಗಳ ವೆಚ್ಚವನ್ನು ಈ ಕೆಳಗಿನಂತೆ ಭರಿಸಲಾಗುವುದು.

ಯೋಜನೆ	ಸಹಾಯಧನ	ಹುಡ್ಕೋ ಸಾಲ	ಫಲಾನುಭವಿಗಳ ವಂತಿಗೆ
ಗ್ರಾಮೀಣ ಆಶ್ರಯ	10,000	10,000	-
ಪ.ಜಾ/ಪ.ಪ	20,000	-	-